ಶ್ರೀ ಟಿ. ಚನ್ನಯ್ಯ.—ಇಲ್ಲ. ನಾವೇನೆ ಈ ಆಸ್ಪತ್ರೆಯನ್ನು ಬೆಗ್ಗರ್ ಕಾಲೋನಿ ಇರತಕ್ಕ ಸ್ಥಳಕ್ಕೆ ಬದಲಾಯಿಸಬೇಕೆಂದು ಆಲೋಚನೆ ಮಾಡಿದ್ದೆವು. ಆದರೆ ಅಲ್ಲಗೆ ಹೊಸದಾಗಿ ಕಟ್ಟಡ ವಗೈರೆಗಳನ್ನು ಕಟ್ಟಿಸುವುದಕ್ಕೆ ಹೆಚ್ಚು ಹಣ ಖರ್ಚಾಗುತ್ತದೆಂಬ ಮತ್ತು ಚಿಕಿತ್ಸೆಗೋಸ್ಕರವಾಗಿ ಬರತಕ್ಕಂಥ ರೋಗಿಗಳಿಗೂ ಕೂಡ ಈ ಸ್ಥಳ ಬಹಳ ದೂರವಾಗಿ ಹೋಗುತ್ತದೆಂಬ ಕಾರಣಗಳಿಗಾಗಿ, ಈಗ ಹಾಲ ಎಲ್ಲಿ ಈ ಆಸ್ಪತ್ರೆ ಇದೆಯೋ ಅಲ್ಲೇ ಇದು ಇರಲಿ ಎಂಬ ತೀರ್ಮಾನಕ್ಕೆ ಬರರಾಯಿತು.

ಶ್ರೀ ಆರ್. ಅನಂತರಾಮನ್ —ಈಗ ಹಾಲ ಇರುವಂಥ ಕಟ್ಟಡ ಮತ್ತು ಅದರ ನಿವೇಶನವನ್ನು ಹರಾಜು ಹಾಕಿದರೆ, ಹೊಸದಾಗಿ ಕಟ್ಟತಕ್ಕ ಕಟ್ಟಡಗಳ ವೆಚ್ಚಕ್ಕಿಂತಲೂ ಹೆಚ್ಚಾಗಿ ಹಣ ಬರುತ್ತದೆಂಬ ಅಂಶ ಸರ್ಕಾರಕ್ಕೆ ಗೊತ್ತಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಈಗ ಹಾಲ ಇರುವ ಕಟ್ಟಡಗಳನ್ನೂ ಮತ್ತು ನಿವೇಶನವನ್ನೂ ಮಾರಾಟಮಾಡುವುದರಿಂದ ನಮಗೆ ಮುಂದೆ ಬೇಕಾಗುವಷ್ಟು ಹಣದ ನರಬರಾಯಿ ಇದರಿಂದ ದೊರೆಯುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಸರ್ಕಾರದವರು ಈ ಅಂಶವನ್ನು ಅಲೋಚನೆಮಾಡಿ ನೋಡಿದ್ದಾರೆ.

ಶ್ರೀ ಬಿ. ರಾಚಯ್ಯ.—ಕುಷ್ಠರೋಗದಿಂದ ನರಳುತ್ತಿರುವವರ ಸಂಖ್ಯೆ ಎಷ್ಟು ಎಂಬುದನ್ನು ತಿಳಿಯಲು ಸರ್ವೇ ಏನಾದರೂ ನಡೆಸಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಸರ್ವೆ ಮಾಡಿಲ್ಲ. ಸ್ಯಾಂಪಲ್ ಸರ್ವೆ ಮಾತ್ರ ಮಾಡರಾಗಿದೆ. ಆದಕಾರಣ ಖಚಿತವಾಗಿ ಸಂಸ್ಥಾನಾಮಳೆ ನರಳತಕ್ಕ ರೋಗಿಗಳ ಸಂಖ್ಯೆ ಎಷ್ಟು ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಆದರೆ ಸಾಮಾನ್ಯವಾಗಿ ಚಾಮರಾಜನಗರ, ಟೀ-ನರಸೀಪುರ, ಮದ್ದೂರು, ಮಳವಳ್ಳಿ ಮತ್ತು ಗೌರಿಬಿದನೂರು ತಾಲ್ಲೂಕಿನಲ್ಲಿ ಹೊಸೂರು ವ್ಯಾಪ್ತಿಯ ಈ ರೋಗವಿದ್ದು, ಈ ಸ್ಥಳಗಳಲ್ಲಿ ಈ ರೋಗದಿಂದ ನರಳತಕ್ಕಂಥ ಜನರು ಜಾಸ್ತಿಯಾಗಿರುವುದರಿಂದ ಆಯಾಯಾ ತಾಲ್ಲೂಕಿನಲ್ಲಿ ಒಂದೊಂದು leprosy clinic ಗಳನ್ನು ಏರ್ಪಾಡು ಮಾಡಿ, ಆ ರೋಗಿಗಳಿಗೆ ಅವರವರ ಮನೆಗಳಲ್ಲೇ ಅವರಿಗೆ ಚಿಕಿತ್ಸೆಕೊಡಿಸತಕ್ಕಂಥ ಒಂದು ಏರ್ಪಾಡನ್ನು ಮಾಡರಾಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆ ಕಡೆಯ ಜನರು ಬೇರೆ ಕಡೆಗೆ ಹೋಗದಂತೆ ಅಲ್ಲಲ್ಲಿ ತಡೆದು ಅವರಿಗೆ ಚಿಕಿತ್ಸೆ ಕೊಡತಕ್ಕ ಬಗ್ಗೆ ಈ ಪೆಂಟರುಗಳನ್ನು ತಾವು ಏರ್ಪಾಡುಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಆಯಾ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏರ್ಪಾಡುಮಾಡಿ, ಅವರವರ ಮನೆಗಳಲ್ಲೇ ಅವರಿಗೆ ಚಿಕಿತ್ಸೆಕೊಡುವ ಏರ್ಪಾಡನ್ನೂ ಮಾಡರಾಗಿದೆ.

"Sulagitthi" (different equivalent in English).

Q.—433. Srimathi Bellary SIDDAMMA (Davangere).—

Will the Government be pleased to state:—

whether they would provide a different English equivalent to the word 'sulagitthi' instead of the 'English translation "midwife"?

A.—Sri T. CHANNIAH (Minister for Public Health and Local Self-Government).—

The suggestion will be examined.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಸರ್ಕಾರದವರು ನನ್ನ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದ ಉದ್ದೇಶದಿಂದ ನಾನು ಉಪ ಪ್ರಶ್ನೆ ಹಾಕುವುದಿಲ್ಲ.

ಶ್ರೀ ಆರ್. ಅನಂತರಾಮನ್.—ಈ "ಸೂಲಗಿತ್ತಿ" ಎಂಬತಕ್ಕ ಪದ ಬಹಳ ಅಶ್ಲೀಲವಾಗಿದೆಯೆಂದು ಅನೇಕರು ಈ ಶಿಕ್ಷಣವನ್ನು ಪಡೆಯಲು ಬರುವುದಕ್ಕೆ ಬಹಳ ಹಿಗುಪ್ಪೆಪಡುತ್ತಿದ್ದಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಜಿ. ಶಿವಪ್ಪ.—ಈ ಪದಕ್ಕೆ ಸರಿಯಾದ ಮತೊಂದು ಪದವನ್ನು ಸಂಸ್ಕೃತದಲ್ಲಿ ಹುಡುಕುವುದಕ್ಕಾಗಿ ತಾವೇನಾದರೂ ಆಲೋಚನೆಮಾಡಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಈ 'ಸೂಲಗಿತ್ತಿ' ಎಂಬತಕ್ಕ ಪದ ಬಹಳ ಹಿಂದಿನಿಂದಲೂ ಬಳಕೆ ಬಂದಿರತಕ್ಕದ್ದಾಗಿದೆ. ಇದಕ್ಕೆ ಈಗ ಒಂದು ಹೊಸ ಪದವನ್ನು ಬಳಸುವುದರಿಂದ ಜನಗಳಿಗೆ ಬಹಳ ಕಷ್ಟವಾಗಬಹುದು.

Road from Venkataiyana Chatra to Bandigowdanahalli.

Q.—445. Sri U. M. MADAPPA (Chamarajanagar).—

Will the Government be pleased to state:—

(*a*) whether the road from Venkataiyana Chatra to Bandigowdanahalli *via* Bisalvadi is under the control of the Mysore District Board;

(*b*) if so, whether the said road is fit for traffic;

(*c*) if not, whether the same has come to their notice?

A.—Sri T. CHANNIAH (Minister for Public Health and Local Self-Government).—

(*a*) Yes.
(*b*) Yes.
(*c*) Does not arise.

ಶ್ರೀ ಯು. ಎಂ. ಮಾದಪ್ಪ.—ಈ ರೋಡಿಗೆ 1954-55ರಲ್ಲಿ A.R. ಮತ್ತು S.R. ಗ್ರಾಂಟ್ ಬಗ್ಗೆ ಎಷ್ಟು ಪೊಬಲಗನ್ನು ಕೊಟ್ಟಿದ್ದೀರಿ?

ಶ್ರೀ ಟಿ. ಚನ್ನಯ್ಯ.—ಕೊಟ್ಟಿದ್ದೇವೆ.

ಶ್ರೀ ಯು. ಎಂ. ಮಾದಪ್ಪ.—ಎಷ್ಟು ಕೊಟ್ಟಿದ್ದೀರಿ?

ಶ್ರೀ ಟಿ. ಚನ್ನಯ್ಯ.—ಮೈಲಿ ಒಂದಕ್ಕೆ 500 ರೂಪಾಯಿಗಳ ಪ್ರಕಾರ 5 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ.